

# ಕೇಡಿನ ಹಾರ

ಲೋಭವೆಂಬುದು ವೈರಸ್ ಇದ್ದ ಹಾಗೆ. ಇರುವುದನ್ನು ಬಿಟ್ಟು ಇರದ ಮರೀಚಿಕೆಯ ಬೆನ್ನುಹತ್ತಿ ಹೊರಟವರಿಗೆ ಸಿಗುವುದು ನಿರಾಸೆ ದುರಂತದ ಪ್ರತಿಫಲವೇ. ಕೇಡೆಂಬುದು ಮನುಷ್ಯನ ಬದುಕಿನೊಳಗೆ ಪ್ರವೇಶಿಸುವ ಪರಿಯನ್ನು ಬಹುಸೂಕ್ಷ್ಮವಾಗಿ ಕಟ್ಟಿಕೊಡುವ ಕಿರುಚಿತ್ರವಿದು.

■ ಗೌರಿ

ಮನುಷ್ಯನ ಬದುಕಿನೊಳಗೆ 'ಕೇಡು' ಸುಂದರವಾದ ಮುಖಹೊತ್ತೇ ಪ್ರವೇಶಿಸುತ್ತದೆ. ಆ ಅಲಂಕಾರದ ಮುಖದ ಹಿಂದಿನ ಅಪಾಯಕಾರಿ ಕ್ರೌರ್ಯ ಕಾಣುವುದು ಕಡುಕಷ್ಟ. ಮೇಲು ಮೇಲಿನ ಆಕರ್ಷಣೆಗೆ ಮರುಳಾಗಿ ಕೇಡಿಗೆ ಬಲಿಯಾದವರು ನಾಶವಾಗುವುದಿಲ್ಲ; ಬದಲಿಗೆ ಅವರೇ ಕೇಡಿನ ರೂಪವಾಗಿ ಬದಲಾಗುತ್ತಾರೆ. ಮತ್ತೊಂದು ಬಲಿಗಾಗಿ ಕಾಯುತ್ತಾರೆ. ಇಂಥ ಕೇಡಿನ ಕಬಂಧಬಾಹುಗಳನ್ನು ಕಾಣಿಸುವ ಕಥನ 'ನಯನತಾರಾಸ್ ನೆಕ್ಲೇಸ್'. ಕೊರಳಹಾರ ಎನ್ನುವುದು ಇಡೀ ಚಿತ್ರದಲ್ಲಿ ಕೇಡಿನ ರೂಪಕವಾಗಿಯೇ ಬಂದಿದೆ.

ನಯನತಾರಾ ಎಂಬ ಹೆಣ್ಣು, ಕನ್ನಡಿ ಮುಂದೆ ನಿಂತುಕೊಂಡು ವಿಡಿಯೊ ನೋಡುತ್ತ ಮೇಕಪ್ ಮಾಡಿಕೊಳ್ಳಲು ಪ್ರಯಾಸಪಡುತ್ತಿರುವ ದೃಶ್ಯದೊಂದಿಗೆ ಈ ಕಿರುಚಿತ್ರ ಶುರುವಾಗುತ್ತದೆ. ಮರುದೃಶ್ಯದಲ್ಲಿಯೇ ಅವಳು ಅಲ್ಕಾ ಎಂಬ ಇನ್ನೊಬ್ಬಳ ಮುಂದೆ ಕೂತು, ಎಲೈಟ್ ಜನರ ಜೊತೆ ಹೇಗೆ ನಡೆದುಕೊಳ್ಳಬೇಕು ಎಂಬ ಕುರಿತು ಪಾಠ ಮಾಡುತ್ತಿರುತ್ತಾಳೆ. ಅಲ್ಕಾ ಕೆಳಮಧ್ಯಮ ವರ್ಗದ ಹೆಣ್ಣು. ಮನೆ ತುಂಬಿ ತುಳುಕುವ ಯಾವ್ಯಾವುದೋ ಸಾಮಗ್ರಿಗಳು, ಮನಸ್ಸೊಳಗೆ ಪ್ರವೇಶಿಸಿ ಗದ್ದಲವೆಬ್ಬಿಸುತ್ತಿರುವ ಶ್ರೀಮಂತಿಕೆಯನ್ನು ಅನುಭವಿಸುವ ಲೋಭ, ಅದಕ್ಕೆ ತೊಡಕಾಗಿರುವ ಸದ್ಯದ ಬದುಕು ಎಲ್ಲವನ್ನೂ ಕಣ್ಣುಗಳಲ್ಲಿ ಹೊತ್ತುಕೊಂಡ ಅವಳು ಸಮಾಜದ ವರ್ಗವೊಂದರ ಮನಸ್ಸಿನೊಳಗಿನ ಬಯಕೆಗಳ ಪ್ರತಿನಿಧಿಯಾಗಿಯೂ ಕಾಣಿಸುತ್ತಿರುತ್ತಾಳೆ.

ಪ್ರತಿಭೇಟಿಯಲ್ಲಿ, ಪ್ರತಿ ಮಾತಿನಲ್ಲಿ ನಯನತಾರಾ, ಅಲ್ಕಾಳಲ್ಲಿ ವೈಭೋಗದ ಬದುಕಿನ ಕನಸಿನ ಬೀಜಕ್ಕೆ ನೀರೆರೆಯುತ್ತಲೇ ಇರುತ್ತಾಳೆ. ಅದರ ಫಲವನ್ನೂ ಅವಳಲ್ಲಿ ಕಾಣುತ್ತಾಳೆ. ಅಲ್ಕಾಳಲ್ಲಿ ಕೆಳಮಧ್ಯಮವರ್ಗದ ಮಿತಿಗಳು, ಸಂಸಾರದ ಅನುದಿನದ ಜಂಜಡಗಳು ಮತ್ತು ಝುಗಮಗ ಜಗತ್ತಿನ ಕನಸುಗಳು ಪರಸ್ಪರ ಘರ್ಷಣೆಗೆ ಇಳಿಯುತ್ತಲೇ ಇರುತ್ತವೆ. ಪ್ರತಿಸಲವೂ ಶ್ರೀಮಂತಿಕೆಯಕನಸಿನಕೈಯೇಮೇಲಾಗುತ್ತಿರುತ್ತದೆ. ಕೊನೆಗೂ ಅಲ್ಕಾ, ಇರುವುದೆಲ್ಲವ ಬಿಟ್ಟು ಇದೆಯೆಂಬಂತೆ ತೋರುತ್ತಿರುವ ಸುಖದ ಲೋಭದ ದಾರಿಯಲ್ಲಿ ಸಾಗಲು ನಿಶ್ಚಯಿಸುತ್ತಾಳೆ. ಇದಕ್ಕೆ ನಯನತಾರಾಳೇ ಅವಳನ್ನು ಅಣಿಗೊಳಿಸುತ್ತಾಳೆ. ಬದಲಾಗಿದ್ದ ಮನಸ್ಥಿತಿಗೆ ಅನುಗುಣವಾಗಿ ಬಾಹ್ಯರೂಪವೂ ಬದಲಾಗುತ್ತದೆ. ಮಾಸಲು ಚೂಡಿದಾರದ ಜಾಗದಲ್ಲಿ ಮಾಡರ್ನ್ ಉಡುಗೆ ತೊಡುಗೆಗಳು ಬರುತ್ತವೆ. ನಯನತಾರಾ ತನ್ನದೇ ಕೊರಳಹಾರವನ್ನು ಅವಳಿಗೆ ಹಾಕಿ ಕಳಿಸುತ್ತಾಳೆ.



**ಹೆಸರು:** ನಯನತಾರಾಸ್ ನೆಕ್ಲೆಸ್
**ನಿರ್ದೇಶನ:** ಜಯದೀಪ್ ಸರ್ಕಾರ್
**ನಿರ್ಮಾಣ:** ಸೀಗ್ರಾಮ್
**ಛಾಯಾಗ್ರಹಣ:** ವಿರಾಜ್ ಸಿಂಗ್ ಗೋಹಿಲ್
**ಸಂಕಲನ:** ಅಪೂರ್ವ ಅಸ್ರಾನಿ
**ಸಂಗೀತ:** ಸೋಮೇಶ್ ಸಾಹೆ
**ತಾರಾಗಣ:** ಕೊಂಕಣಾ ಸೆನ್, ತಿಲೋತ್ತಮಾ ಶೋಮೆ

ಅಲ್ಕಾ ಫೇಸ್‌ಬುಕ್‌ನಲ್ಲಿ ಸಿಕ್ಕ, ಕೈತುಂಬ ಸಂಬಳ ಬರುವ ಕೆಲಸದಲ್ಲಿರುವ ತನ್ನ ಬಾಲ್ಯದ ಸಹಪಾಠಿಯನ್ನು ಭೇಟಿಮಾಡಲು ಐಷಾರಾಮಿ ಹೋಟೆಲಿಗೆ ಹೋಗುತ್ತಾಳೆ.

ಅಚ್ಚರಿಯೆಂದರೆ ಶ್ರೀಮಂತಿಕೆಯಲ್ಲಿಯೇ ಮಿಂದೇಳುತ್ತಿರುವ ಗೆಳೆಯನಿಗೆ ಸರಳ ಬದುಕಿನ ಕನಸು! ಯಾವ ಜಗತ್ತನ್ನು ಒಡೆದುಕೊಂಡು ಮೇಲೆ ಹಾರಬೇಕು ಎಂದು ಅಲ್ಕಾ ಬಯಸುತ್ತಿದ್ದಾಳೋ ಅದೇ ಜಗತ್ತನ್ನು ಅವಳ ಶ್ರೀಮಂತ ಗೆಳೆಯ ಬಯಸುತ್ತಿದ್ದಾನೆ. ಅಲ್ಕಾಗೆ ಫಾರಿನ್ ಟ್ರಿಪ್‌ನ ಡಿಸ್ನಿಲ್ಯಾಂಡ್‌ನ ಕನಸಾದರೆ, ಅವನಿಗೆ ಮಧ್ಯಮವರ್ಗದ ಸರಳ ಬದುಕಿನ ಕನಸು. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿದ ಅಲ್ಕಾಗೆ ಅಲ್ಲಿ ಆ ಜಗತ್ತನ್ನು ಬಿಟ್ಟು ಇನ್ನೊಂದಕ್ಕೆ ತುಡಿಯುತ್ತಿರುವ ಮನುಷ್ಯನೇ ಎದುರಾಗುತ್ತಾನೆ. ಆ ಲೋಕದ ಕುರಿತ ಕನಸುಗಳಿಗೆ ಸೂಜಿಮೊನೆ ತಾಗಿ ಭ್ರಮೆಯೊಡೆಯುತ್ತದೆ.

ಅಲ್ಲಿಂದ ಬರುವಷ್ಟರಲ್ಲಿ ನಯನತಾರಾಳನ್ನು ಅವಳ ಗಂಡನೇ ಗುಂಡಿಕ್ಕಿ ಸಾಯಿಸಿರುತ್ತಾನೆ. ಅಷ್ಟರಲ್ಲಿ ಅಲ್ಕಾಳೇ ನಯನತಾರಾ ಆಗಿ ಬದಲಾಗಿರುತ್ತಾಳೆ. ಅವಳ ಕೊರಳಹಾರ ಇವಳ ಕೊರಳಲ್ಲಿರುತ್ತದೆ. ಆ ಹಾರವನ್ನು ನಯನತಾರಾಳ ಕಾರಿನ ಸೀಟಿನ ಮೇಲಿಟ್ಟು ಅಲ್ಕಾ ನಡೆದುಹೋಗುತ್ತಾಳೆ. ಹಾರ ಕಾಯುತ್ತಲಿರುತ್ತದೆ ಯಾವುದಾದರೂ ಕೊರಳು ಸಿಗಬಹುದೇ ಎಂದು...

ಈ ಕಿರುಚಿತ್ರ ವೀಕ್ಷಣೆಗೆ bit.ly/2HsOIRl ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.